ಸಾಕ್ಷಿಯನ್ನು ಇಂದು ದಿನಾಂಕ**07.11.2022** ರಂದು ನ್ಯಾಯಾಲಯಕ್ಕೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ

ಚಾಸಾ–**2** ಮತ್ತು **3** ರವರನ್ನು ನಾನು ಮೌಖಿಕವಾಗಿ ವಿಷಯ ತಿಳಿಸಿ ಕರೆದುಕೊಂಡು ಬಂದಿರುತ್ತೇನೆ. ಲಿಖಿತ ನೋಟಿಸ ನೀಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಫೋಟೋ ಸೆರೆ ಹಿಡಿಯಲಾಗಿರುತ್ತದೆ. ಚಾಸಾ–**1** ಸದರಿ ಫೋಟೋ ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕ**22.09.2016** ರಂದು ಮುಂಜಾನೆ **9.15** ಪೊಲೀಸ್ ಠಾಣೆಯಿಂದ ಹೊರಟಿರುತ್ತೇವೆ. ಘಟನಾ ಸ್ಥಳಕ್ಕೆ ತಲುಪಿದಾಗ **10** ಗಂಟೆಯಾಗಿತ್ತು. ಘಟನಾ ಸ್ಥಳಕ್ಕೆ ತಲುಪಿ ಸುಮಾರು **5** ನಿಮಿಷ ಆರೋಪಿತರನ್ನು ಗಮನಿಸಿರುತ್ತೇವೆ. ದಿನಾಂಕ**22.09.2016** ರಂದು ಕೆಎ **28** ಜಿ **496** ವಾಹನದಲ್ಲಿ ಹೋಗಿರುತ್ತೇವೆ. ಸದರಿ ವಾಹನದ ಚಾಲಕ ನಾನೆ ಆಗಿದ್ದೆ. ನಾನು ಆ ದಿನ ಚಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಕರ್ತವ್ಯಕ್ಕೆ ಪೇದೆಯಾಗಿ ನೇಮಕಗೊಂಡಿರುತ್ತೇನೆ. **2007** ರಲ್ಲಿ ನಾನು ವಾಹನ ಚಾಲನಾ ಸನ್ನದು ಪಡೆದಿರುತ್ತೇನೆ. ಸದರಿ ಸನ್ನದ್ದು ನವೀಕರಿಸಿದ್ದೇನೆ. ದಾಳಿಗೆ ನಾನು**,** ಚಾಸಾ–**1** ರಿಂದ **7** ಹೋಗಿದ್ದೆವು. ಅಂಬಿಗರ ಚೌಡಯ್ಯ ಸರ್ಕಲನ ಯಾವ ದಿಕ್ಕಿಗೆ ವಾಹನ ನಿಲ್ಲಿಸಿದ್ದೆವು ಎಂದು ನನಗೆ ನೆನಪಿಲ್ಲ. ಅಂಬಿಗರ ಚೌಡಯ್ಯ ಸರ್ಕಲನ ಯಾವ ದಿಕ್ಕಿಗೆ ನಿಂತು ಗಮನಿಸಿರುತ್ತೇವೆ ಎಂದು ನನಗೆ ನೆನಪಿಲ್ಲ.

ಅಂಬಿಗರ ಚೌಡಯ್ಯ ಸರ್ಕಲನ ದಕ್ಷಿಣಕ್ಕೆ **5** ಅಡಿ ಅಂತರದಲ್ಲಿ ಆರೋಪಿ ನಿಂತಿದ್ದ. ಸದರಿ ಸ್ಥಳದ ಪೂರ್ವಕ್ಕೆ ಬಾಪುಗೌಡ ಪೊಲೀಸ್ ಪಾಟೀಲ ಇವರ ಮನೆ**,** ದಕ್ಷಿಣಕ್ಕೆ ಸಿಕಂದರ ಇವರ ಮನೆ**,** ಉತ್ತರಕ್ಕೆ ಗೊಲಗೇರಿ ಗುಬ್ಬೇವಾಡ ಗ್ರಾಮದ ರಸ್ತೆ ಇದೆ. ಅಂಬಿಗರ ಚೌಡಯ್ಯ ಸರ್ಕಲನ ಜನಸಂದಣಿ ಸ್ಥಳ ಎಂದರೆ ಸರಿ. ಟೆಟ್ರಾ ಪ್ಯಾಕೇಟಗಳು ಸಾಮಾನ್ಯವಾಗಿ ಹೋಟಲ ಹೊರಗೆ ಮತ್ತು ರಸ್ತೆ ಅಕ್ಕಪಕ್ಕದಲ್ಲಿ ಹಾಗೂ ದಾಬಾಗಳ ಅಕ್ಕಪಕ್ಕದಲ್ಲಿ ಬಿದ್ದಿರುತ್ತವೆ ಎಂದರೆ ಸರಿಯಲ್ಲ. ಅಂಬಿಗರ ಚೌಡಯ್ಯ ಸರ್ಕಲನ ಅಕ್ಕಪಕ್ಕದಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸರಿ. ನನ್ನ ಹೇಳಿಕೆ ಚಾಸಾ–**8** ರವರ ಮುಂದೆ ನೀಡಿದ್ದೇನೆ. ಆ ಸಮಯದಲ್ಲಿ ಚಾಸಾ–**5** ಮತ್ತು **6** ರವರು

ಇದ್ದರು. ದಿನಾಂಕ.**22.09.2016** ರಂದು ನನ್ನ ಹೇಳಿಕೆ ಠಾಣೆಯಲ್ಲಿ ಬೆಳಿಗ್ಗೆ **11** ವರೆ ಇಂದ **12** ರವರೆಗೆ ನೀಡಿದ್ದೇನೆ. ನನ್ನ ಹೇಳಿಕೆ ಎಸ್ ಎಂ ಬಿರಾದಾರ ಎಂಬ ಸಿಬ್ಬಂದಿ ಹತ್ತಿರ ಹೇಳಿರುತ್ತೇನೆ ಅವರು ಅದನ್ನು ಬೆರಳಚ್ಚು ಮಾಡಿರುತ್ತಾರೆ. ಮೊದಲಿಗೆ ನನ್ನ ಹೇಳಿಕೆ ನೀಡಿದ್ದೇನೆ. ನಂತರ ಯಾರ ಹೇಳಿಕೆ ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ–**1** ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಮಾಲಿಗು ಆರೋಪಿತರಿಗು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಮುದ್ದೇ ಮಾಲು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ನಾವು ಹೋಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.